ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಲಿ

979(1644); ಶ್ರೀ ಹ್ಯಾರಿಸ್ ಎನ್.ಎ. (ಶಾಂತಿನಗರ)

ಅ) ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯ ವ್ಯಾಪ್ತಿಯಲ್ಲಿ ಉದ್ದೇಶಿತ ಮಾಲಿನ್ಯ ನಿಯಂತ್ರಣದ ಗುರಿ ಮತ್ತು ಸಾಧನೆಗಳ ವಿವರಗಳೇನು

ಆ) ಜಲ, ವಾಯು ಮತ್ತು ಶಬ್ದ ಮಾಲಿನ್ಯಗಳ ನಿಯಂತ್ರಣಕ್ಕಾಗಿ ಅನುಷ್ಠಾನಗೊಳಿಸುತ್ತಿರುವ ಕಾರ್ಯಕ್ರಮಗಳೇನು? ವಿವರ ನೀಡುವುದು.

ಇ) ಶಾಖೋತ್ಪನ್ನ ವಿದ್ಯುತ್ ಕಾರ್ಖಾನೆಗಳಿಂದ ಉತ್ಪತ್ತಿಯಾಗುವ ನಿರುಪಯುಕ್ತ ಹಾರುಬೂದಿಯನ್ನು ಸಿಮೆಂಟ್ ಮತ್ತು ಇಟ್ಟಿಗೆ ತಯಾರಿಕೆಯಲ್ಲಿ ಬಳಸುವ ದಿಸೆಯಲ್ಲಿ ವಿದ್ಯುತ್ ಘಟಕಗಳು ಕೈಗೊಂಡ ಕ್ರಮಗಳು ಮತ್ತು ವಾಸ್ತಾವಾಂಶಗಳೇನು?

ಶ್ರೀ ಬಿ. ರಮಾನಾಥ ರೈ (ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ, 1974 ರ ಅಡಿ ಸ್ಥಾಪನೆಗೊಂಡಿದ್ದು, ಜಲ ಕಾಯ್ದೆ 1974 ಹಾಗೂ ವಾಯು ಕಾಯ್ದೆ, 1981 ಹಾಗೂ ಪರಿಸರ (ಸಂರಕ್ಷಣೆ) ಕಾಯ್ದೆ, 1986 ಅಡಿ ರಚಿಸಿರುವ ಕೆಲವು ನಿಯಮಗಳನ್ನು ಅನುಷ್ಠಾನಗೊಳಿಸುವ ಗುರಿ ಹೊಂದಿದೆ. ಅವುಗಳೆಂದರೆ,

- ಜಲ ಕಾಯ್ದೆ ಹಾಗೂ ವಾಯು ಕಾಯ್ದೆ ಅಡಿಯಲ್ಲಿ ಕೈಗಾರಿಕೆಗಳಿಂದ ಉಂಟಾಗುವ ಜಲ ಹಾಗೂ ವಾಯು ಮಾಲಿನ್ಯ ನಿಯಂತ್ರಿಸುವುದು.

- ರಾಜ್ಯಾದ್ಯಂತ ಕೈಗಾರಿಕೆಗಳು ಮತ್ತು ಸ್ಥಳೀಯ ಸಂಸ್ಥೆಗಳು ಕಲುಷಿತ ನೀರನ್ನು ಹಾಗೂ ವಾಯು ಮಾಲಿನ್ಯ ಮೂಲಗಳಿಗೆ ಮಾಲಿನ್ಯ ನಿಯಂತ್ರಣ ಘಟಕಗಳನ್ನು ಅಳವಡಿಸಿ, ಮಂಡಳಿ ನಿಗಧಿಪಡಿಸುವ ಗುಣಮಾನಕಗಳಿಗೆ ಕಾರ್ಯ ನಿರ್ವಹಿಸುತ್ತಿರುವುದನ್ನು ಮಾಪನ ಮಾಡುವುದು.
- ಉಲ್ಲಂಘಿತ ಘಟಕಗಳ ವಿರುದ್ಧ ಕಾನೂನು ಅಡಿ ಕ್ರಮಗಳನ್ನು ಜರುಗಿಸುವುದು.
- ರಾಜ್ಯದಲ್ಲಿನ ನದಿ ಹಾಗೂ ಕೆರೆ ನೀರಿನ ಗುಣಮಟ್ಟದ ಮಾಪನ ಮಾಡುವುದು.
- ರಾಜ್ಯದಲ್ಲಿ ಪರಿವೇಷ್ಟಿಕ ವಾಯು ಹಾಗೂ ಶಬ್ದ ಗುಣಮಟ್ಟ ಮಾಪನ ಮಾಡುವುದು.
- ಪರಿಸರ (ಸಂರಕ್ಷಣೆ) ಕಾಯ್ದೆ, 1986 ರಡಿಯಲ್ಲಿ ರಚಿಸಲಾದ ಘನ ತ್ಯಾಜ್ಯ ನಿರ್ವಹಣೆ, ಅಪಾಯಕಾರಿ ತ್ಯಾಜ್ಯ ನಿರ್ವಹಣೆ, ಆಸ್ಪತ್ರೆ ತ್ಯಾಜ್ಯ ನಿರ್ವಹಣೆ, ಪ್ಲಾಸ್ಟಿಕ್ ತ್ಯಾಜ್ಯನಿರ್ವಹಣೆ, ಇ-ತ್ಯಾಜ್ಯ ನಿರ್ವಹಣೆ ನಿಯಮಗಳನ್ನು ಅನುಷ್ಠಾನಗೊಳಿಸುವುದು

ಸಾಧನೆಗಳ ಸಂಕ್ಷಿಪ್ತ ವಿವರ (ಮಾರ್ಚ್ 2015 ರ ಅಂತ್ಯಕ್ಕೆ)

- ಮಂಡಳಿಯು 64,847 ಉದ್ದಿಮೆಗಳು ಹಾಗೂ ಇತರೆ ಚಟುವಟಿಕೆಗಳನ್ನು ಗುರುತಿಸಿ, ಇವುಗಳಿಂದ ಉಂಟಾಗುವ ಮಾಲಿನ್ಯವನ್ನು ನಿಯಂತ್ರಿಸಲು ಕ್ರಮ ಕೈಗೊಂಡಿದೆ.
- 2014-15 ನೇ ಸಾಲಿನಲ್ಲಿ 22,032 ಉದ್ದಿಮೆ/ಚಟುವಟಿಕೆಗಳನ್ನು ಪರಿವೀಕ್ಷಿಸಲಾಗಿದೆ.

- 83 ಸ್ಥಳಗಳಲ್ಲಿ ನದಿ ನೀರಿನ ಗುಣಮಟ್ಟವನ್ನು ಪ್ರತಿ ತಿಂಗಳು ಮಾಪನ ಮಾಡುತ್ತಿದೆ.
- 120 ಕೆರೆ ನೀರಿನ ಗುಣಮಟ್ಟವನ್ನು ಪ್ರತಿ ತಿಂಗಳು ಮಾಪನ ಮಾಡುತ್ತಿದೆ.
- ರಾಜ್ಯದ 18 ನಗರ/ಪಟ್ಟಣ ಕೇಂದ್ರಗಳಲ್ಲಿ ಪರಿವೇಷ್ಟಿಕ ವಾಯು ಗುಣಮಟ್ಟ ಮಾಪನ ಮಾಡುತ್ತಿದೆ.
- ಬೆಂಗಳೂರಿನ 15 ಸ್ಥಳಗಳಲ್ಲಿ ಪರಿವೇಷ್ಟಿಕ ವಾಯು ಗುಣಮಟ್ಟ ಮಾಪನ ಹಾಗೂ 10 ಸ್ಥಳಗಳಲ್ಲಿ ನಿರಂತರ ಶಬ್ಧ ಮಾಪನ ಮಾಡುತ್ತಿದೆ.
- 3708 ಉದ್ದಿಮೆಗಳು ಅಪಾಯಕಾರಿ ತ್ಯಾಜ್ಯ ಉತ್ಪತ್ತಿ ಮಾಡುತ್ತಿದ್ದು ಇದನ್ನು ಸಮರ್ಪಕವಾಗಿ ನಿರ್ವಹಿಸಲು ಒಂದು ಸಾಮೂಹಿಕ ಅಪಾಯಕಾರಿ ತ್ಯಾಜ್ಯ ವಿಲೇವಾರಿ ಘಟಕವನ್ನು (TSDF) ಖಾಸಗಿ ಹಾಗೂ ಸರ್ಕಾರದ ಸಹ ಭಾಗೀತ್ವದಲ್ಲಿ ದಾಬಸಪೇಟೆಯಲ್ಲಿ ಸ್ಥಾಪಿಸಲಾಗಿದೆ.
- 148 ಅಪಾಯಕಾರಿ ತ್ಯಾಜ್ಯ ಸಂಸ್ಕರಣಾ ಘಟಕಗಳನ್ನು ನೋಂದಾಯಿಸಲಾಗಿದೆ.
- ರಾಜ್ಯದ ಎಲ್ಲಾ ಜಿಲ್ಲೆಗಳಿಂದ ಉತ್ಪತ್ತಿಯಾಗುವ ಆಸ್ಪತ್ರೆ ಜೈವಿಕ ತ್ಯಾಜ್ಯ ಸಂಸ್ಕರಣೆಗೆ 21 ಸಾಮೂಹಿಕ ಜೈವಿಕ ತ್ಯಾಜ್ಯ ವಿಲೇವಾರಿ ಘಟಕಗಳನ್ನು ಸ್ಥಾಪಿಸಿದೆ.
- ರಾಜ್ಯದಲ್ಲಿ 57 ಇ–ತ್ಯಾಜ್ಯ ಮರುಬಳಕೆ ಸಂಸ್ಕರಣಾ ಘಟಕಗಳನ್ನು ಸ್ಥಾಪಿಸಲು ಉತ್ತೇಜಿಸಿದೆ.
- ಸಣ್ಣ ಕೈಗಾರಿಕೆಗಳಿಂದ ಉತ್ಪತ್ತಿಯಾಗುವ ಕಲುಷಿತ ನೀರನ್ನು ಶುದ್ಧೀಕರಿಸಲು ಅನುವಾಗುವಂತೆ ಖಾಸಗಿ ಸಂಸ್ಥೆಗಳು ಒಟ್ಟು 9

ಸಾಮೂಹಿಕ ಶುದ್ಧೀಕರಣ ಘಟಕಗಳನ್ನು ಸ್ಥಾಪಿಸಲು ಉತ್ತೇಜಿಸಿದೆ. ಇವುಗಳಲ್ಲಿ 8 ಘಟಕಗಳು ಬೆಂಗಳೂರಿನಲ್ಲಿ ಹಾಗೂ 1 ಘಟಕ ಮಂಗಳೂರಿನಲ್ಲಿ ಸ್ಥಾಪಿಸಲಾಗಿದೆ.

- ಮಂಡಳಿಯು ಇ–ಆಡಳಿತ ವ್ಯವಸ್ಥೆ ಅಳವಡಿಸಿಕೊಂಡಿದ್ದು, XGN ತಂತ್ರಾಂಶದ ಮೂಲಕ ಸಮ್ಮತಿ ಅರ್ಜಿಗಳನ್ನು ಸ್ವೀಕರಿಸಿ ವಿಲೇವಾರಿ ಮಾಡುತ್ತಿದೆ.

ಆ) ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಜಲ ಕಾಯ್ದೆ, ವಾಯು ಕಾಯ್ದೆ ಮತ್ತು ಪರಿಸರ ಕಾಯ್ದೆಗಳನ್ನು ಅನುಷ್ಠಾನಗೊಳಿಸುವ ಜವಾಬ್ದಾರಿ ಹೊಂದಿರುತ್ತದೆ. ಈ ಕಾಯ್ದೆಗಳ ಅಡಿಯಲ್ಲಿ ಮಂಡಳಿಯು ರಾಜ್ಯದಲ್ಲಿ ಮಾಲಿನ್ಯವನ್ನು ನಿಯಂತ್ರಿಸುವ ನಿಟ್ಟಿನಲ್ಲಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಿದೆ.

ಜಲಮಾಲಿನ್ಯ

- ಮಂಡಳಿಯು ಜಲಮಾಲಿನ್ಯ ತಡೆಗಟ್ಟಲು 64,847 ಉದ್ದಿಮೆಗಳು ಹಾಗೂ ಇತರೆ ಚಟುವಟಿಕೆಗಳನ್ನು ಗುರುತಿಸಿ, ಇವುಗಳಿಂದ ಉಂಟಾಗುವ ಮಾಲಿನ್ಯವನ್ನು ನಿಯಂತ್ರಿಸಲು ಕ್ರಮ ಕೈಗೊಂಡಿದೆ.
- 2014–15 ನೇ ಸಾಲಿನಲ್ಲಿ 22,032 ಉದ್ದಿಮೆ/ಚಟುವಟಿಕೆಗಳನ್ನು ಪರಿವೀಕ್ಷಿಸಲಾಗಿದೆ.
- 83 ಸ್ಥಳಗಳಲ್ಲಿ ನದಿ ನೀರಿನ ಗುಣಮಟ್ಟವನ್ನು ಪ್ರತಿ ತಿಂಗಳು ಮಾಪನ ಮಾಡುತ್ತಿದೆ.
- 120 ಕೆರೆ ನೀರಿನ ಗುಣಮಟ್ಟವನ್ನು ಪ್ರತಿ ತಿಂಗಳು ಮಾಪನ ಮಾಡುತ್ತಿದೆ.
- ಬೆಂಗಳೂರು ನಗರದ ಪ್ರದೇಶದ ಒಳಚರಂಡಿ ವ್ಯವಸ್ಥೆ ಇರುವ ಪ್ರದೇಶದಲ್ಲಿ, ಉತ್ಪತ್ತಿಯಾಗುವ ರೊಚ್ಚು ನೀರನ್ನು ವೈಜ್ಞಾನಿಕವಾಗಿ

ಒಳಚರಂಡಿ ಮೂಲಕ ಕೊಂಡೊಯ್ದು ರೊಚ್ಚು ನೀರನ್ನು ಸಂಸ್ಕರಣಾ ಘಟಕಗಳಲ್ಲಿ ವೈಜ್ಞಾನಿಕವಾಗಿ ಸಂಸ್ಕರಿಸಿ ವಿಲೇವಾರಿ ಮಾಡುವ ಜವಾಬ್ದಾರಿಯು ಬೆಂಗಳೂರು ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯದ್ದಾಗಿರುತ್ತದೆ. ಈ ಬಗ್ಗೆ ಮಂಡಳಿಯು ಆಗಿಂದಾಗ್ಗೆ ಬಿಡಬ್ಲೂಎಸ್ಎಸ್ಬಿಗೆ ನಿರ್ದೇಶನವನ್ನು ನೀಡುತ್ತಿದೆ. ಕೆರೆ ಮಾಲಿನ್ಯ ತಡೆಗಟ್ಟಲು ನಿರ್ದೇಶನ ಪಾಲಿಸದ ಕಾರಣ BWSSB ಏಳು ನೋಟೀಸುಗಳನ್ನು ಜಾರಿ ಮಾಡಿ ಜಲ ಕಾಯ್ದೆ, 1974 ರಡಿಯಲ್ಲಿ ಕ್ರಿಮಿನಲ್ ಮೊಕದ್ದಮೆಯನ್ನು ಹೂಡಲಾಗಿದೆ.

- ಮಂಡಳಿಯು ಪ್ರತಿ ವರ್ಷ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಶಿಕ್ಷಣ ಇಲಾಖೆಗೆ ಹಾಗು ಪೊಲೀಸ್ ಇಲಾಖೆಗೆ ಪತ್ರವನ್ನು ಬರೆದು ದೀಪಾವಳಿ ಹಬ್ಬದ ಸಂದರ್ಭದಲ್ಲಿ ಒಂದು ಸ್ಕ್ವಾಡ್ನ್ನು ಜಿಲ್ಲಾ ಮಟ್ಟದಲ್ಲಿ ರಚಿಸಿ ಹಬ್ಬವನ್ನು ಪರಿಸರ ಸ್ನೇಹಿಯಾಗಿ ಆಚರಿಸುವ ನಿಟ್ಟಿನಲ್ಲಿ ಕ್ರಮ ಕೈಗೊಂಡಿರುತ್ತದೆ.

ವಾಯುಮಾಲಿನ್ಯ

- ಕಾರ್ಖಾನೆಗಳಿಂದ ಉಂಟಾಗುವ ವಾಯು ಮಾಲಿನ್ಯವನ್ನು ನಿಯಂತ್ರಿಸಲು ಸೂಕ್ತ ವಾಯು ನಿಯಂತ್ರಣ ಘಟಕಗಳನ್ನು ಅಳವಡಿಸುವಂತೆ ಷರತ್ತುಗಳನ್ನು ವಿಧಿಸಿ ಅದರಂತೆ ಕ್ರಮ ಕೈಗೊಳ್ಳಲಾಗುತ್ತಿದೆ.

- ಬೆಂಗಳೂರು ನಗರದಲ್ಲಿ ಹೆಚ್ಚುತ್ತಿರುವ ವಾಯುಮಾಲಿನ್ಯವನ್ನು ತಡೆಗಟ್ಟುವ ನಿಟ್ಟಿನಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಡಬ್ಲೂ.ಪಿ ನಂ:10329/985(ಸಿವಿಲ್ ಪಿಐಎಲ್) ನಿರ್ದೇಶನದಂತೆ ಕಾರ್ಯ ಯೋಜನೆ ರೂಪಿಸಿ ಅದರಂತೆ ಅನುಷ್ಠಾನಗೊಳಿಸಲಾಗುತ್ತಿದೆ.

- ಬೆಂಗಳೂರು ನಗರದಲ್ಲಿ ವಾಯು ಮಾಲಿನ್ಯವನ್ನು ತಡೆಗಟ್ಟಲು ಭಾರತ ಸರ್ಕಾರವು 1997 ರಲ್ಲಿ ಹಸಿರು ಇಂಧನ ನೀತಿ (Green Fuel Policy) ಜಾರಿಗೊಳಿಸಿತು. ಇದರಿಂದ ಇಂಧನದಲ್ಲಿ ಸೀಸ ಮುಕ್ತ ಗಳಿಸಿ 0.25% ರಷ್ಟಿದ್ದ ಗಂಧಕದ ಪ್ರಮಾಣವನ್ನು ಹಂತಹಂತವಾಗಿ ಕಡಿಮೆಗೊಳಿಸಿ 2010 ರಿಂದ 0.005% ಇಳಿಸಲಾಗಿದೆ.

- ಬೆಂಗಳೂರು ನಗರದಲ್ಲಿ ಹೆಚ್ಚುತ್ತಿರುವ ವಾಯು ಮತ್ತು ಶಬ್ದಮಾಲಿನ್ಯ ತಡೆಗಟ್ಟುವ ನಿಟ್ಟಿನಲ್ಲಿ ಮಂಡಳಿಯು ಸೆಕ್ಷನ್ 31(ಎ) ರ ವಾಯು ಕಾಯ್ದೆ ಅನ್ವಯ ಶಬ್ದ ಮಾಲಿನ್ಯ ತಡೆಗಟ್ಟಲು ನಿರ್ದೇಶನ ನೀಡಲಾಗಿದೆ. ಅದರಂತೆ ಸಂಬಂಧಪಟ್ಟ ಇಲಾಖೆಗಳು ಅಲ್ಪಾವಧಿ ಮತ್ತು ದೀರ್ಘವಾಧಿ ಕ್ರಿಯಾ ಯೋಜನೆ ರೂಪಿಸಿ ಅನುಷ್ಠಾನಗೊಳಿಸುತ್ತಿವೆ.

ಶಬ್ದ ಮಾಲಿನ್ಯ:

- ಕೈಗಾರಿಕೆಗಳಿಂದುಂಟಾಗುವ ಶಬ್ದ ಮಾಲಿನ್ಯವನ್ನು ವಾಯು (ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ 1981ರ ಅಡಿಯಲ್ಲಿ ನಿಯಂತ್ರಿಸುತ್ತಿದ್ದು ಕೈಗಾರಿಕೆಗಳ ಸರಹದ್ದಿನೊಳಗೆ ಶಬ್ದದ ಮಟ್ಟವನ್ನು ಮಿತಿಯೊಳಗಿಡಲು, ಸೂಕ್ತ ನಿಯಂತ್ರಣ ವ್ಯವಸ್ಥೆ ಅಳವಡಿಸಲು ಷರತ್ತು ವಿಧಿಸಿ ಸಮ್ಮತಿ ಪತ್ರ ನೀಡಲಾಗುತ್ತಿದೆ. ಮಂಡಳಿಯು ಆಗಿದ್ದಾಗ್ಯೆ ಪರಿವೀಕ್ಷಣೆಯ ಸಮಯದಲ್ಲಿ ಶಬ್ದದ ಮಟ್ಟವನ್ನು ಪರೀಕ್ಷಿಸುತ್ತಿದೆ.

- ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಬೆಂಗಳೂರು ನಗರದಲ್ಲಿ ನಿರಂತರವಾಗಿ ಶಬ್ದ ಮಾಪನ ಮಾಡಲು 10 ನಿರಂತರ ಮಾಪನ ಕೇಂದ್ರಗಳನ್ನು ವಾಣಿಜ್ಯ, ವಸತಿ ಹಾಗೂ ಕೈಗಾರಿಕಾ ಪ್ರದೇಶಗಳಲ್ಲಿ ಸ್ಥಾಪಿಸಿದ್ದು ಈ ನಿರಂತರ ಮಾಪನ

ಕೇಂದ್ರಗಳಿಂದ ಬರುವ ಮಾಪನದ ಮಾಹಿತಿಯನ್ನು ಕ್ರೋಢೀಕರಿಸಿ, ಶಬ್ದ ಮಾಲಿನ್ಯ (ನಿವಾರಣೆ ಮತ್ತು ನಿಭಾವಣೆ) ನಿಯಮ 2000ರಲ್ಲಿ ನಿಗದಿಪಡಿಸಿದ ಮಾನಕಕ್ಕೆ ತುಲನೆ ಮಾಡಿ ಸಂಬಂಧಪಟ್ಟ ಇಲಾಖೆಗಳೊಂದಿಗೆ ಮಾಹಿತಿಯನ್ನು ಹಂಚಿಕೊಳ್ಳಲಾಗುತ್ತಿದ್ದು ಹಾಗೂ ಇಲಾಖೆಗಳ ಶಬ್ದ ಮಾಲಿನ್ಯಕ್ಕೆ ಕಾರಣವಾದ ಮೂಲಗಳನ್ನು ಗುರುತಿಸಿ ನಿಯಂತ್ರಿಸಲು ಸೂಚಿಸಲಾಗಿರುತ್ತದೆ.

- ಬೆಂಗಳೂರು ನಗರದಲ್ಲಿ ಶಬ್ದ ಮಾಪನದ ವರದಿಯ ಪ್ರಕಾರ ಶಬ್ದದ ಮಟ್ಟ ಹೆಚ್ಚಾಗಿರುವ ಕಾರಣ ಮಂಡಳಿಯು ವಾಯು ಕಾಯ್ದೆಯಡಿಯಲ್ಲಿ ಸಾರಿಗೆ ಇಲಾಖೆ, ಪೋಲೀಸ್ ಇಲಾಖೆ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಕ್ರಮ ಕೈಗೊಳ್ಳಲು ಆದೇಶಿಸಿರುತ್ತದೆ.

- ನಗರದಲ್ಲಿ ಲೌಡ್ ಸ್ಪೀಕರ್, ಸಾರ್ವಜನಿಕ ಕಾರ್ಯಕ್ರಮಗಳಿಂದ ಉಂಟಾಗುವ ಶಬ್ದವನ್ನು ನಿಯಂತ್ರಿಸುವ ಜವಾಬ್ದಾರಿಯು ಶಬ್ದ ಮಾಲಿನ್ಯ (ನಿವಾರಣೆ ಮತ್ತು ನಿಭಾವಣೆ) ನಿಯಮ 2000ರ ಅನ್ವಯ ಪೋಲೀಸ್ ಇಲಾಖೆಯ ಹೊಣೆಯಾಗಿದ್ದು ಮಾಲಿನ್ಯ ನಿಯಂತ್ರಣ ಮಂಡಳಿಯು ಪೋಲೀಸ್ ಇಲಾಖೆಯ ಕೋರಿಕೆಯ ಮೇರೆಗೆ ಶಬ್ದ ಮಾಪನ ಮಾಡಿ ಮಾಪನದ ಫಲಿತಾಂಶವನ್ನು ಸೂಕ್ತ ಕ್ರಮ ತೆಗೆದುಕೊಳ್ಳಲು ಪೋಲೀಸ್ ಇಲಾಖೆಗೆ ಒದಗಿಸಿ ಕೊಡುವ ಜವಾಬ್ದಾರಿಯು ಮಂಡಳಿಯದ್ದಾಗಿರುತ್ತದೆ.

- ಬೆಂಗಳೂರು ನಗರದಲ್ಲಿ ಹೆಚ್ಚುತ್ತಿರುವ ವಾಯು ಮತ್ತು ಶಬ್ದ ಮಾಲಿನ್ಯ ತಡೆಗಟ್ಟುವ ನಿಟ್ಟಿನಲ್ಲಿ ಮಂಡಳಿಯು ಸೆಕ್ಷನ್ 31(ಎ) ರ ವಾಯು ಕಾಯ್ದೆ ಅನ್ವಯ ಶಬ್ದ ಮಾಲಿನ್ಯ ತಡೆಗಟ್ಟಲು ನಿರ್ದೇಶನ ನೀಡಲಾಗಿದೆ. ಅದರಂತೆ ಸಂಬಂಧಪಟ್ಟ ಇಲಾಖೆಗಳು

ಅಲ್ಪಾವಧಿ ಮತ್ತು ದೀರ್ಘಾವಧಿ ಕ್ರಿಯಾ ಯೋಜನೆ ರೂಪಿಸಿ ಅನುಷ್ಠಾನಗೊಳಿಸುತ್ತಿವೆ.

ಇ) ರಾಜ್ಯದಲ್ಲಿ ಒಟ್ಟು 15 ಶಾಖೋತ್ಪನ್ನ ವಿದ್ಯುತ್ ಕಾರ್ಖಾನೆಗಳು ಇರುತ್ತವೆ. ಶಾಖೋತ್ಪನ್ನ ವಿದ್ಯುತ್ ಕಾರ್ಖಾನೆಗಳಿಂದ ಉತ್ಪತ್ತಿಯಾಗುವ ಹಾರುಬೂದಿಯನ್ನು ಬಳಸುವ ದಿಸೆಯಲ್ಲಿ, ಕಾರ್ಖಾನೆಗಳು ಈ ಕೆಳಕಂಡ ಕ್ರಮಗಳನ್ನು ತೆಗೆದುಕೊಂಡಿರುತ್ತವೆ.

- ರಾಜ್ಯದಲ್ಲಿನ ಶಾಖೋತ್ಪನ್ನ ವಿದ್ಯುತ್ ಘಟಕಗಳಿಂದ ಪ್ರತಿ ವರ್ಷ ಸುಮಾರು 45 ಲಕ್ಷ ಮೆಟ್ರಿಕ್ ಟನ್‌ನಷ್ಟು ಹಾರುಬೂದಿ ಉತ್ಪತ್ತಿಯಾಗುತ್ತಿದ್ದು ಅದರಲ್ಲಿ ಸುಮಾರು 26 ಲಕ್ಷ ಮೆಟ್ರಿಕ್ ಟನ್‌ನಷ್ಟನ್ನು ಸಿಮೆಂಟ್ ಕೈಗಾರಿಕೆಗಳಲ್ಲಿ ಬಳಸಲಾಗುತ್ತಿದೆ.
- ಸುಮಾರು 2.7ಲಕ್ಷ ಮೆಟ್ರಿಕ್ ಟನ್‌ನಷ್ಟು ಇಟ್ಟಿಗೆ ತಯಾರಿಸಲು ಉಪಯೋಗಿಸಲ್ಪಡುತ್ತಿದೆ.
- ಹೆಚ್ಚುವರಿ ಹಾರು ಬೂದಿಯನ್ನು fly ash pond ಗಳಲ್ಲಿ ಸಂಗ್ರಹಿಸಲಾಗುತ್ತಿದೆ.

ಆಸ್ತಿ ಬೆಳೆ ನಾಶ

981(1232); ಶ್ರೀ ಜೀವರಾಜ್ ಡಿ.ಎನ್. (ಶೃಂಗೇರಿ)

ಅ) ರಾಜ್ಯದ ಹಲವು ಜಿಲ್ಲೆಗಳಲ್ಲಿ ಅಕಾಲಿಕ ಆಲಿಕಲ್ಲು ಮಳೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ; ಹಾಗಿದ್ದಲ್ಲಿ, ಅಕಾಲಿಕ ಮತ್ತು ಆಲಿಕಲ್ಲು ಮಳೆಯಿಂದ ಹಾನಿಗೊಳಗಾಗಿರುವ ಜಿಲ್ಲೆಗಳು ಯಾವುವು;

ಆ) ಈ ಜಿಲ್ಲೆಗಳಲ್ಲಿ ಕೃಷಿ ಭೂಮಿಗೆ ಆಗಿರುವ ಹಾನಿ ಎಷ್ಟು; ಎಷ್ಟು ಎಕರೆ ಪ್ರದೇಶಗಳಲ್ಲಿ ಬೆಳೆ ಹಾನಿ ಆಗಿದೆ (ಬೆಳೆ ಹಾನಿಯ ಪೂರ್ಣ ಜಿಲ್ಲಾವಾರು ವಿವರವನ್ನು ನೀಡುವುದು)?